# ಕ್ರೀಡಾಕೂಟ ಸಮಾರೋಪ

**ಧಾರವಾಡ:** ನಗರದ ಜವಾಹರ ನವೋದಯ ವಿದ್ಯಾಲಯದಲ್ಲಿ ಎರಡು ದಿನಗಳಿಂದ ನಡೆಯುತ್ತಿರುವ ಹೈದ್ರಾಬಾದ್ ಪ್ರಾದೇಶಿಕ ವಿಭಾಗದ ಟೆಕ್ವಾಂಡೊ ಕ್ರೀಡಾಕೂಟವು ಜು. 17ರಂದು ಮುಕ್ತಾಯವಾಗಲಿದೆ. ಬುಧವಾರ ಮಧ್ಯಾಹ್ನ 12.30ಕ್ಕೆ ಸಮಾರೋಪದಲ್ಲಿ ಜಿಲ್ಲಾಧಿಕಾರಿ ದೀಪಾ ಚೋಳನ್ ವಿಜೇತರಿಗೆ ಪಾರಿತೋಷಕಗಳು ಹಾಗೂ ಪದಕಗಳನ್ನು ವಿತರಿಸುವರು. ಆಹಾರ ಇಲಾಖೆ ಜಂಟಿ ನಿರ್ದೇಶಕ ಸದಾಶಿವ ಮರ್ಜಿ, ಆರೋಗ್ಯ ಇಲಾಖೆಯ ಡಾ. ಯಶವಂತ್ ಎ.ಎಂ. ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಡಾ. ಬಸವರಾಜ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಅರಣ್ಯ ಇಲಾಖೆ ವಾಹನಗಳ ಹರಾಜು

**ಧಾರವಾಡ:** ಧಾರವಾಡ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯೋತ್ಪನ್ನಗಳನ್ನು ಕಳ್ಳಸಾಗಾಣಿಕೆ ಮಾಡುವಾಗ ಅರಣ್ಯ ಅಪರಾಧ ಮೊಕದ್ದಮೆ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾದ ಐದು ವಾಹನಗಳನ್ನು ಆ. 8ರಂದು ಮಧ್ಯಾಹ್ನ 3ಕ್ಕೆ ಹರಾಜು ಮಾಡಲಾಗುವುದು. ವಾಹನಗಳ ವಿವರ, ಅರ್ಜಿ ನಮೂನೆ ಹಾಗೂ ಇತರ ವಿವರಗಳಿಗಾಗಿ ಕಿತ್ತೂರು ಚೆನ್ನಮ್ಮ ಪಾರ್ಕ್ ಹತ್ತಿರ ಇರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಬಹುದು. ಅಥವಾ 0836-2447092 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Checkout Full Clip

**ಕನ್ನಡ ಪ್ರಭ ಪತ್ರಿಕೆ ದಿನಾಂಕ: 17.07.2019**